

ಎಲ್ಲರಿಗೂ ಅದು ಸಾಧ್ಯವಿಲ್ಲ' ಎನ್ನುತ್ತಾರೆ. ಕ್ರಿಯಾಶೀಲವಾಗಿ ನಡೆಯುತ್ತಿರುವ 60 ಮಿಲ್ಲುಗಳ ಪೈಕಿ ಎಂಟೋ ಹತ್ತೋ ಮಾತ್ರ ಆರ್ಥಿಕ ಸುಸ್ಥಿತಿಯಲ್ಲಿವೆ. ಸುಮಾರು 20 ಮಿಲ್ಲುಗಳು ಸಾಧಾರಣ ಸ್ಥಿತಿಯಲ್ಲಿವೆ. ಉಳಿದವು ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿವೆ. ಕಲ್ಕತ್ತದ ಬಾರಾನಗರದಲ್ಲಿರುವ ಮಿಲ್ಲಿನ ಕೆಲಸಗಾರರು, 'ನಮಗೆ ತಿಂಗಳಿನಲ್ಲಿ 12 ದಿನ ಮಾತ್ರ ಕೆಲಸವಿರುತ್ತದೆ. ಕಳೆದ ಇಪ್ಪತ್ತು ವರ್ಷದಿಂದ ಇಲ್ಲಿ ಕೆಲಸದಲ್ಲಿದ್ದೇವೆ. ಮೊದಲೆಲ್ಲಾ ತಿಂಗಳಿಡೀ ದುಡಿದರೂ ಕೆಲಸ ಮುಗಿಯುತ್ತಿರಲಿಲ್ಲ. ಈಗ ಕೆಲಸದ ದಿನಗಳಿಗಷ್ಟೇ ಸಂಬಳ ಸಿಗುತ್ತಿದೆ, ಅದರಿಂದ ಸಂಸಾರ ನಡೆಸುವುದು ಕಷ್ಟವಾಗುತ್ತಿದೆ' ಎಂದು ಅಲವತ್ತುಕೊಂಡಿದ್ದಾರೆ. ಕೆಲಸಗಾರರ ಯೂನಿಯನ್ ಅಧ್ಯಕ್ಷರಾಗಿರುವ ಸುಶೀಲ್ ಜೈಸ್ವಾಲ್, 'ನಾನಿಲ್ಲಿ 25 ವರ್ಷಗಳಿಂದ ಇದ್ದೇನೆ. ಆರ್ಡರ್‌ಗಳಿಲ್ಲದೆ ಯಂತ್ರಗಳು ತುಕ್ಕು ಹಿಡಿಯುತ್ತಿವೆ. ಕೆಲಸ ಮಾಡದ ಮೆಷಿನ್‌ಗಳನ್ನು ಬದಿಗೆ ಸರಿಸಿ, ಕಟ್ಟಡವನ್ನೂ ಗೋದಾಮಿನಂತೆ ಬಳಸುವ ಸ್ಥಿತಿ ಬಂದಿದೆ' ಎನ್ನುತ್ತಾರೆ. ಮಿಲ್‌ನಲ್ಲಿ ಅಧಿಕಾರಿಯಾಗಿರುವ ಡಿ.ಪಿ. ಭಟ್ಟರ್, 'ಕೇವಲ ಅರ್ಧದಷ್ಟು ಪ್ರಮಾಣದ ಕೆಲಸ ನಡೆಯುತ್ತಿದೆ, ಸರ್ಕಾರದ ಅವೈಜ್ಞಾನಿಕ ಬೆಲೆ ನಿಗದಿಯೇ ಇದಕ್ಕೆಲ್ಲ ಕಾರಣ' ಎನ್ನುತ್ತಾರೆ.

ಸೆಣಬು ಉದ್ಯಮದ ಬಿಕ್ಕಟ್ಟಿಗೆ ಕೆಲಸಗಾರರ ಕೊರತೆಯೂ ಒಂದು ಕಾರಣವಾಗಿದೆ. ಏಷ್ಯಾದ ಅತಿ ದೊಡ್ಡ ಸೆಣಬಿನ ಮಿಲ್ಲು ಎಂದು ಹೆಸರುವಾಸಿಯಾಗಿರುವ 'ಹುಕುಂಚಂದ್ ಜ್ಯೂಟ್ ಮಿಲ್'ನಲ್ಲಿ ಎರಡು ಸಾವಿರ ಕೆಲಸ ಖಾಲಿ ಇವೆ. 'ನಮ್ಮ ಮಿಲ್‌ಗಳಿಗೆ ಕೆಲಸಗಾರರು ಸಿಗುತ್ತಿಲ್ಲ' ಎನ್ನುವ ಮಿಲ್‌ನ ನಿರ್ದೇಶಕ ಸಮೀರ್ ಕುಮಾರ್ ಚಂಡ, 'ಸೆಣಬಿನ ಮಿಲ್‌ಗಳಿಗೆ ಇನ್ನೂ ಉಜ್ವಲ ಭವಿಷ್ಯವಿದೆ, ಎಲ್ಲವೂ ಮುಗಿದುಹೋಗಿಲ್ಲ, ನಮ್ಮ ಮಿಲ್‌ಗಳಲ್ಲಿ, ಉತ್ಪನ್ನಗಳಲ್ಲಿ ಹೊಸತನ ತಂದರೆ ಬೇಡಿಕೆ ತಾನೇ ತಾನಾಗಿ ಹೆಚ್ಚುತ್ತದೆ' ಎಂಬ ಆಶಾಭಾವ ಹೊಂದಿದ್ದಾರೆ.

ಕೇಂದ್ರ ಸರ್ಕಾರವು ಸೆಣಬಿನ ಮಿಲ್‌ಗಳ ಕಷ್ಟಕ್ಕೆ ನಿಧಾನವಾಗಿಯಾದರೂ ಸ್ಪಂದಿಸಲು ಪ್ರಾರಂಭಿಸಿತು. ಹಳೆಯ ಯಂತ್ರಗಳನ್ನು ಬದಲಾಯಿಸಲು, ಖರೀದಿಸಲು, ಹೊಸ ಉದ್ಯಮ ಪ್ರಾರಂಭಿಸಲು ಸಬ್ಸಿಡಿ ನೀಡಲು ಮುಂದಾಯಿತು. ಆದರೆ, ಆ ಉತ್ಸಾಹ ಜಾರಿಯಲ್ಲಿದ್ದದ್ದು ಕೇವಲ ಎರಡೇ ವರ್ಷ ಎಂದು ಮಿಲ್‌ನ ಅಧಿಕಾರಿಗಳು ನಿಟ್ಟುಸಿರುಬಿಡುತ್ತಾರೆ. 'ಸ್ಕೀಮ್ ಹೊಸದಾಗಿ ಜಾರಿಯಾದಾಗ ನಮಗೆಲ್ಲ ಆತ್ಮವಿಶ್ವಾಸ



## ಫ್ಯಾಕ್ಟ್ ಶೀಟ್

- ಹೊಳೆಯುವ ಬಣ್ಣದಿಂದಾಗಿ ಸೆಣಬನ್ನು 'ಗೋಲ್ಡನ್ ಫೈಬರ್' ಎನ್ನುತ್ತಾರೆ.
- ಪಶ್ಚಿಮ ಬಂಗಾಳ, ಬಿಹಾರ, ಅಸ್ಸಾಂ, ಮೇಘಾಲಯ, ಒಡಿಶಾ, ತ್ರಿಪುರಾ ರಾಜ್ಯಗಳಲ್ಲಿ ಸೆಣಬಿನ ಕೃಷಿ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತದೆ. ದೇಶದ ನೂರು ಜಿಲ್ಲೆಗಳಲ್ಲಿ ಸೆಣಬಿನ ಕೃಷಿ ನಡೆಯುತ್ತದೆ.
- ದೇಶದ ಒಟ್ಟು ಸೆಣಬಿನ ಉತ್ಪನ್ನದಲ್ಲಿ ಪಶ್ಚಿಮ ಬಂಗಾಳ ರಾಜ್ಯದ ಪಾಲು ಶೇ. 60ರಷ್ಟಿದೆ.
- ವಿಶ್ವದ ಒಟ್ಟು ಸೆಣಬಿನ ಬೆಳೆ ಉತ್ಪನ್ನದಲ್ಲಿ ಭಾರತ ಮೊದಲನೇ ಸ್ಥಾನದಲ್ಲಿದ್ದರೆ, ಬಾಂಗ್ಲಾದೇಶ ಎರಡನೇ ಸ್ಥಾನದಲ್ಲಿದೆ. ಚೀನಾ ಮತ್ತು ಉಜ್ಬೇಕಿಸ್ತಾನಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿವೆ. ವಿಶ್ವದ ಸೆಣಬಿನ ಉತ್ಪನ್ನಗಳ ಬೇಡಿಕೆಯ ಶೇ. 70ರಷ್ಟನ್ನು ಬಾಂಗ್ಲಾದೇಶ ಪೂರೈಸುತ್ತಿದೆ.
- ಭಾರತದ ವಾರ್ಷಿಕ ಸೆಣಬಿನ ಉತ್ಪನ್ನದ ಪ್ರಮಾಣ 1.9 ದಶಲಕ್ಷ ಮೆಟ್ರಿಕ್ ಟನ್!